ದಿನಾಂಕ 23-01-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ**

2 ನೇ ವಾದಿ ನ್ಯಾಯಾಲಯದಲ್ಲಿ ಹಾಜರು ಇರುತ್ತಾರೆ ಎಂದರೆ ಸರಿ. 1 ನೇ ವಾದಿಯು ಈ ದಾವೆ ಹೂಡಿದ ನಂತರ ಮರಣ ಹೊಂದಿರುತ್ತಾರೆ ಎಂದರೆ ಸರಿ. ಆತನ ಹೆಂಡತಿಯ ಹೆಸರು ಚನ್ನವ್ವ. ನನ್ನ ತಂದೆ ಚನ್ನವ್ವನ ಅಣ್ಣ ಎಂದರೆ ಸರಿಯಲ್ಲ. 1 ನೇ ವಾದಿಗೆ ಎರಡು ಜನ ಗಂಡು ಮಕ್ಕಳು ಮತ್ತು 2 ಜನ ಹೆಣ್ಣು ಮಕ್ಕಳು ಎಂದರೆ ಸರಿ. ಅದರಲ್ಲಿ ಒಬ್ಬ ಮಗ ರಾಮಪ್ಪ ಮರಣ ಹೊಂದಿದ್ದು ಆತನಿಗೆ ಎರಡು ಜನ ಗಂಡು ಮಕ್ಕಳು ಎಂದರೆ ಸರಿ. 2 ನೇ ವಾದಿಗೆ ಪಾರವ್ವ ಎಂಬ ಅಕ್ಕ ಇರುತ್ತಾಳೆ ಎಂದರೆ ಸರಿ. ಇವರುಗಳೆಲ್ಲರೂ ಜೀವಂತ ಇರುತ್ತಾರೆ ಎಂದರೆ ಸರಿ.

2. ಈ ದಾವೆಯನ್ನು 10 ಗುಂಟೆ ಜಾಗವನ್ನು ಖರೀದಿಸುವ ಕುರಿತು ಹೂಡಿರುತ್ತಾರೆ. ಸದರಿ ದಾವಾ ಆಸ್ತಿ ಸರ್ವೆ ನಂ.2/1 ಆಗಿರುತ್ತದೆ. ನಿಪಿ 1 ರ ಕರಾರು ಪತ್ರದಲ್ಲಿ ಸರ್ವೆ ನಂ.2/1 ಎಂದು ಬರೆಸಿರುತ್ತಾರೆ. ಸಾಕ್ಷಿಗೆ ನಿಪಿ 1 ನ್ನು ತೋರಿಸಿ ಸರ್ವೆ ನಂ.2/1 ಅ ಎಂದು ತೋರಿಸಲಾಗಿದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ ಆಸ್ತಿಯ ವಿಸ್ತೀರ್ಣ 2 ಎಕರೆ 10 ಗುಂಟೆ ತೋರಿಸಲಾಗಿರುತ್ತದೆ ಎಂದರೆ ಸರಿ. ನಿಪಿ 1 ರ ಸಮಯದಲ್ಲಿ ನಾನು ದಾವಾ ಆಸ್ತಿಯ ಪಹಣಿ ನೋಡಿರುತ್ತೇನೆ. ನಿಪಿ 1 ರ ಸಮಯದಲ್ಲಿ ಅಂಕಸಾಪುರ ಗ್ರಾಮದಲ್ಲಿ ಸರ್ವೆ ನಂ.2/1 ಅ ಆಸ್ತಿಯೇ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಕುರಿತು ಪಹಣಿಯನ್ನು ವಾದಿಯು ಈ ದಾವೆಯಲ್ಲಿ ಹಾಜರುಪಡಿಸಿರುತ್ತಾರೆ. ಸದರಿ ವಾದಿಯು ಹಾಜರುಪಡಿಸಿದ ದಾಖಲೆಗಳನ್ನು ನಾನು ನೋಡಿರುತ್ತೇನೆ.

3. ನಿಪಿ 1 ರ ಖರೀದಿಯ ಮಾತುಕತೆ ದಿನಾಂಕ 28-03-2003 ರಂದು ಪ್ರತಿವಾದಿಗಳ ಮನೆಯ ಮುಂದೆ ಆಗಿರುತ್ತದೆ. ಸದರಿ ಮಾತುಕತೆಯ ಸಮಯದಲ್ಲಿ ದಾವಾ ಸ್ವತ್ತಿನ ಸರ್ವೆ ನಂಬರ್ ಸ್ವಾಮಿಲಿಂಗಪ್ಪ ಲಿಂಗಪ್ಪ ನಡುವಿನಮನಿ ರವರ ಹೆಸರಿನಲ್ಲಿ ಇತ್ತು. ಆತನು ನಿಪಿ 1 ಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಖರೀದಿಯ ಮಾತುಕತೆಗೆ ಆತನು ಬಂದಿದ್ದನು. ಸಾಕ್ಷಿಗೆ ನಿಪಿ 1 ರ ದಾಖಲೆಯನ್ನು ತೋರಿಸಿ ಸ್ವಾಮಿಲಿಂಗಪ್ಪನು ಸಹಿ ಮಾಡಿರುವುದನ್ನು ಕೇಳಿದಾಗ ಸಾಕ್ಷಿಯು ಸದರಿ ದಾಖಲೆಯ ಮಾರಾಟಗಾರರ 1 ನೇ ಸಹಿಯನ್ನು ತೋರಿಸಿ ಸ್ವಾಮಿಲಿಂಗಪ್ಪನ ಸಹಿಯಾಗಿರುವುದಾಗಿ ನುಡಿಯುತ್ತಾರೆ. ಸ್ವಾಮಿಲಿಂಗಪ್ಪನ ತಂದೆಯ ಹೆಸರು ನಿಂಗಪ್ಪ, ಸದರಿ

ನಿಂಗಪ್ಪನ ತಂದೆಯ ಹೆಸರು ನಾಗಪ್ಪ ಎಂದರೆ ಸರಿಯಲ್ಲ.

ಪಿ ಡಬ್ಲ್ಯೂ: 2

4. ಮಾತುಕತೆಯಾದ ನಂತರ ಅದೇ ದಿನ ನಿಪಿ 1 ರ ಕರಾರನ್ನು ಬರೆಯಲಾಗಿರುತ್ತದೆ. ಸದರಿ ಕರಾರಿನ ಬಾಂಡ್ ನ್ನು ಮೃತ ರಾಮಪ್ಪನು ಮಾತುಕತೆಯ ಒಂದು ದಿನದ ಮುಂಚೆ ತಂದಿರುತ್ತಾನೆ. ವ್ಯವಹಾರದ ಮಾತುಕತೆ ಮುಗಿದ ನಂತರ ರೂ.10,000/- ಹಣವನ್ನು ಮುಂಗಡವಾಗಿ ನೀಡಲಾಗಿರುತ್ತದೆ. ಉಳಿದ ರೂ.8,000/- ಗಳನ್ನು ಮಾತುಕತೆಯಾದ ಎರಡು ತಿಂಗಳ ನಂತರ ನೀಡಲಾಗಿರುತ್ತದೆ. ಆ ಕುರಿತು ಯಾವುದೇ ಸ್ವೀಕೃತಿ ದಾಖಲೆಯನ್ನು ಪಡೆದಿರುವುದಿಲ್ಲ. ಆ ರೀತಿ ಯಾವುದೇ ಮುಂಗಡ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮುಂಗಡ ಹಣದ ಬಗ್ಗೆ ಬರವಣಿಗೆ ಮಾಡಿಕೊಳ್ಳಲು ತಿಳಿಸಿರುವುದಿಲ್ಲ.

5. ನಿಪಿ 1 ರಂತೆ 2004 ರ ಯುಗಾದಿಯ ಪೂರ್ವದಲ್ಲಿ ಖರೀದಿ ಪತ್ರ ಬರೆದುಕೊಡಬೇಕೆಂದು ಮಾತುಕತೆಯಾಗಿತ್ತು ಎಂದರೆ ಸರಿ. ಸದರಿ ಯುಗಾದಿಯ ಪೂರ್ವದಲ್ಲಿ ಖರೀದಿ ವ್ಯವಹಾರ ಪೂರ್ಣವಾಗಿರುವುದಿಲ್ಲ ಎಂದರೆ ಸರಿ. ನಿಂಗಪ್ಪ 2004 ರಲ್ಲಿ ಮರಣ ಹೊಂದಿರುತ್ತಾನೆ ಎಂದರೆ ಸರಿ. ನಿಪಿ 1 ರ ನಂತರ ಈ ದಾವೆ ಹೂಡುವ ತನಕ ವಾದಿಯು ಮಾರಾಟಗಾರರ ಬಳಿ ಖರೀದಿ ಪತ್ರ ಬರೆದುಕೊಡುವಂತೆ ಕೇಳಿರಲಿಲ್ಲ ಎಂದರೆ ಸರಿಯಲ್ಲ. ನಿಂಗಪ್ಪನು ದಿನಾಂಕ 06-01-2005 ರಂದು ಮರಣ ಹೊಂದಿರುತ್ತಾನೆ ಎಂದರೆ ಸರಿ. ನಿಪಿ 1 ಕ್ಕೆ ನಿಂಗಪ್ಪ ಅಥವಾ ಆತನ ವಾರಸುದಾರರು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ನ್ನು ನಾಗಪ್ಪ ಚೌಡಪ್ಪ ಬೆನ್ನೂರು ರವರು ಬರೆದಿರುತ್ತಾರೆ.

6. ನಿಪಿ 1 ರಲ್ಲಿ ತೋರಿಸಿರುವ ಚಕ್ಕುಬಂದಿಯು ಸ್ವತ್ತಿನ ಪೂರ್ತಿ ಸರ್ವೆ ನಂಬರ್ ನ ಚಕ್ಕುಬಂದಿಯಾಗಿರುತ್ತದೆ ಎಂದರೆ ಸರಿ. ಖರೀದಿ ಮಾತುಕತೆಯ 10 ಗುಂಟೆ ಜಾಗದ ಚಕ್ಕುಬಂದಿ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ವಾದಿಯರು ಸೇರಿ ನಿಪಿ 1 ರ ಖರೀದಿ ಕರಾರು ಪತ್ರವನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ವಾದಿಗಳ ಸಂಬಂಧಿಯಾದ ಕಾರಣ ಅವರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.